# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1509/2016/ಡಿಆರ್ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 13/6/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಟಿ.ವಿ.ವೀರಭದ್ರಯ್ಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಎನ್.ಎಸ್.ನಾಗರಾಜರಾವ್, ವಕೀಲರು, ಶ್ರೀಹರಿ ಕೃಪ, ಲಾಸ್ಟ್ ಕ್ರಾಸ್, ಟ್ಯಂಕ್ ಬಂಡ್ ರಸ್ತೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಟಿ.ವಿ.ವೀರಭದ್ರಯ್ಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಹಿರೇಬಿದನೂರು ಗ್ರಾಮದ ಸ.ನಂ.203/14 ಮತ್ತು 203/22 ರಲ್ಲಿ 2.25 ಎಕರೆ ವಿಸ್ತೀರ್ಣಕ್ಕೆ ಕಂದಾಯ ಇಲಾಖೆಯಿಂದ ನಿಯಮಾನುಸಾರ ಭೂ ಪರಿವರ್ತನೆ ಆದೇಶ ಪಡೆದು, ವಸತಿ ಯೋಜನೆಗೆ ನಿವೇಶನಗಳನ್ನು ನೀಲಿ ನಕ್ಷೆಯ ಮೂಲಕ ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ ಇವರಿಂದ ಅನುಮೋದನೆ ಪಡೆದು, ಮೂಲಭೂತ ಸೌಕರ್ಯಕ್ಕೆ ಮೀಸಲಿಟ್ಟ ಭೂಮಿಯನ್ನು ಸೇರಿಸಿಕೊಂಡು ನಕಲಿ ನಕ್ಷೆಯನ್ನು ತಯಾರಿಸಿ ಗ್ರಾಮಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸರ್ಕಾರದ ನಿಯಮಾವಳಿಗಳಿಗೆ ವಿರುದ್ಧವಾಗಿ ಠರಾವುಗೊಳಿಸಿ ನಕಲಿ ನಕ್ಷೆಗೆ ಎದುರುದಾರರು ಅನುಮೋದನೆ ಮಾಡಿರುತ್ತಾರೆ. ಇದರಿಂದ ಸರ್ಕಾರಕ್ಕೆ ಮತ್ತು ಗ್ರಾಮ ಪಂಚಾಯಿತಿಗೆ ಆರ್ಥಿಕ ನಷ್ಟ ಉಂಟುಮಾಡಿ ಕರ್ತವ್ಯಲೋಪ ಎಸಗಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರು ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ವಸತಿ ವಿನ್ಯಾಸದ ನಕ್ಷೆಗಾಗಿ ದಾಖಲಾತಿಗಳೊಂದಿಗೆ ಸಲ್ಲಿಸಲಾಗುವ ಅರ್ಜಿಯನ್ನು ಪಂಚಾಯಿತಿಯಲ್ಲಿ ಸ್ವೀಕರಿಸಿ, ಪರಿಶೀಲಿಸಿ ಸದರಿ ಅರ್ಜಿಯನ್ನು ಗ್ರಾಮಪಂಚಾಯತ್ ಸಭೆಯಲ್ಲಿ ಇಡಲಾಗುತ್ತದೆ. ಗ್ರಾಮಪಂಚಾಯಿತಿಯ ಸದಸ್ಯರು ಸಭೆಯಲ್ಲಿ ನಕ್ಷೆ ಇರುವ ಬಗ್ಗೆ ಅನುಮೋದಿಸಿದ ನಂತರ ಗ್ರಾಮಪಂಚಾಯಿತಿ ಠರಾವಿನ ಆಧಾರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ

ಇವರ ಅನುಮೋದನೆಗಾಗಿ ಕಳುಹಿಸಿಕೊಡಲಾಗುತ್ತದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ನಕ್ಷೆಯನ್ನು ಅನುಮೋದನೆ ಮಾಡಲು ಯಾವುದೇ ಅಧಿಕಾರವಿಲ್ಲ. ದೂರುದಾರರು ತನ್ನ ದೂರಿನಲ್ಲಿ ನಗರ ಮತ್ತು ಗ್ರಾಮಾಂತರ ಯೋಜನ್ಲಾ ಪ್ರಾಧಿಕಾರದ ಅನುಮೋದನೆಯ ನಂತರ ಗ್ರಾಮಪಂಚಾಯಿತಿಯ ಅಧ್ಯಕ್ಷರ ಜೊತೆ ಸೇರಿ ಸರಸ್ವತಮ್ಮ ಮತ್ತು ಲಕ್ಷ್ಮೀದೇವಮ್ಮ ಇವರ ಪರವಾಗಿ ಪಂಚಾಯತ್ ಠರಾವನ್ನು ಮಾಡಿ ಮೂಲಭೂತ ಸೌಕರ್ಯಕ್ಕೆ ಮೀಸಲಿಟ್ಟ ಭೂಮಿಯನ್ನು ಕೂಡ ಮನೆ ನಿವೇಶನಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಸುಳ್ಳು ದೂರನ್ನು ನೀಡಿರುತ್ತಾರೆ. ಸರಸ್ವತಮ್ಮ ಮತ್ತು ಲಕ್ಷ್ಮೀದೇವಮ್ಮ ಎಂಬುವರು ದಿ.5/2/14 ರಂದು ಅರ್ಜಿಯನ್ನು ಸಲ್ಲಿಸಿದ್ದು, ಆ ಬಗ್ಗೆ ಸದರಿ ಅರ್ಜಿಯನ್ನು ದಿ.13/2/14 ರ ಸಭೆಯಲ್ಲಿ ಮಂಡಿಸಲಾಗಿದೆ. ಸದರಿ ನಕ್ಷೆಯು ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದಲ್ಲಿ ದಿ.28/2/14 ರಂದು ಅನುಮೋದನೆ ಗೊಂಡಿರುತ್ತದೆ. ಆದ್ದರಿಂದ, ಯಾವುದೇ ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲ ಎಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯವರು ಪ್ರಾಧಿಕಾರದ ವಿನ್ಯಾಸ ಪತ್ರದ ಮುಂಚಿತವಾಗಿ ಕರಡು ನಕ್ಷೆಗೆ ಅಧ್ಯಕ್ಷ/ಪಿ.ಡಿ.ಓ/ಕಾರ್ಯದರ್ಶಿಗಳು ಅನುಮೋದಿಸಿರುವುದು ದಾಖಲೆಗಳಲ್ಲಿ ಕಂಡುಬಂದಿರುತ್ತದೆ. ಪುನಃ ಸದರಿ ಇದೇ ವಿವಾದಿತ ಸ್ವತ್ತಿಗೆ ಪ್ರಾಧಿಕಾರದಿಂದ ಅನುಮೋದಿಸಿರುವ ವಿನ್ಯಾಸದ ನಕ್ಷೆಗೆ ದಿ.28/2/14 ರ ಅನುಮೋದನೆಯನ್ನು ಗ್ರಾಮಪಂಚಾಯಿತಿ ಆಡಳಿತ ಮಂಡಳಿಯಿಂದ ಅನುಮೋದಿಸಿರುತ್ತಾರೆ. ಆದಕಾರಣ ಈ ಹಂತದಲ್ಲಿ ಪಿ.ಡಿ.ಓ/ಕಾರ್ಯದರ್ಶಿಗಳು ಅಸಹಾಯಕರಾಗಿರುತ್ತಾರೆಂದು ಕಂಡುಬಂದಿರುತ್ತದೆ. ಸದರಿ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳ ಆದೇಶ ಪಡೆದ ನಂತರ ಷರತ್ತುಗಳನ್ನು ಪೂರ್ಣಗೊಳಿಸದೆ ಖಾಸಗಿ ನೀಲಿ ನಕ್ಷೆಗೆ ಅನುಮೋದಿಸಿರುವುದು ಮತ್ತು ಪ್ರಾಧಿಕಾರದಿಂದ ಅನುಮೋದಿಸಿರುವ ವಿನ್ಯಾಸಕ್ಕೂ ಸಹ ಗ್ರಾಮಪಂಚಾಯಿತಿಯಲ್ಲಿ ಅನುಮೋದಿಸಿರುವುದು ದೃಢಪಟ್ಟಿರುತ್ತದೆ. ಆದಕಾರಣ ಗ್ರಾಮಪಂಚಾಯಿತಿಯ ಆಡಳಿತ ಮಂಡಳಿಯವರು 2 ನಕ್ಷೆಗಳಿಗೆ ವಿವಿಧ ದಿನಾಂಕಗಳಲ್ಲಿ ಅನುಮೋದಿಸಿರುವುದು ಕರ್ತವ್ಯಲೋಪವುಂಟುಮಾಡಿರುವುದು ದೃಢಪಟ್ಟಿರುತ್ತದೆ. ಗ್ರಾಮಪಂಚಾಯಿತಿಯ ಆಡಳಿತ ಮಂಡಳಿಯವರು ದಿ.13/2/14 ರಲ್ಲಿ ಕ್ರ.ಸಂ.13 ರಲ್ಲಿ ಭೂಪರಿವರ್ತನಾ ಆದೇಶದ ಸ್ವತ್ತಿಗೆ ಠರಾವುಗೊಳಿಸಿ ಅನುಮೋದಿಸಿರುವುದು ಕಾನೂನುಬದ್ಧವಾಗಿರುವುದಿಲ್ಲವೆಂದು ದೃಢಪಟ್ಟಿರುತ್ತದೆ. ಪಿ.ಡಿ.ಓ/ಕಾರ್ಯದರ್ಶಿಗಳು ತಮ್ಮ ಆಕ್ಷೇಪಣೆಯಲ್ಲಿ ಸಲ್ಲಿಸಿರುವ ಅಂಶಗಳಿಂದ ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶ ನೀಡಿರುವಂತೆ ಷರತ್ತುಗಳನ್ನು ಉಲ್ಲಂಘಿಸಿ ಗ್ರಾಮಪಂಚಾಯಿತಿಯ ಆಡಳಿತ ಮಂಡಳಿಯವರು ಅನುಮೋದಿಸಿರುವುದು ಸಮಂಜಸವಾಗಿರುವುದಿಲ್ಲ. ಪ್ರಾಧಿಕಾರದಿಂದ ವಾಸದ ಮನೆಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವಿಸ್ತೀರ್ಣ ಶೇ.52.89 ಅನುಮೋದಿತ ನಕ್ಷೆಯಲ್ಲಿ ದಾಖಲಿಸಿದ್ದು, ಗ್ರಾಮಪಂಚಾಯಿತಿಯ ಆಡಳಿತ ಮಂಡಳಿ ಅನುಮೋದಿಸಿರುವ ನಕ್ಷೆಯಲ್ಲಿ ಶೇ.54.99 ವಿಸ್ತೀರ್ಣಕ್ಕೆ ಅನುಮೋದಿಸಲಾಗಿದೆ. ಆದಕಾರಣ ಈ ವ್ಯತ್ಯಾಸಕ್ಕೆ ಗ್ರಾಮಪಂಚಾಯಿತಿಯ ಅಧ್ಯಕ್ಷರು ಕಾರಣಕರ್ತರಾಗಿರುತ್ತಾರೆಂದು ಹೇಳಿರುತ್ತಾರೆ.

5) ದೂರುದಾರರ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ, ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶದ ಷರತ್ತುಗಳನ್ನು ಉಲ್ಲಂಘಿಸಲಾಗಿದೆ, ಗ್ರಾಮಪಂಚಾಯಿತಿ ಆಡಳಿತ ಮಂಡಳಿಯವರು ಅನುಮೋದಿಸಿರುವ ನಕ್ಷೆಗಳಿಗೆ ಒತ್ತಡದಿಂದ ಪಿ.ಡಿ.ಓ ಸಹಿ ಮಾಡಿರುತ್ತಾರೆ. ಪ್ರಾಧಿಕಾರದಿಂದ ಅನುಮೋದಿತ ನಕ್ಷೆಯಲ್ಲಿ ಹಾಗೂ ಗ್ರಾಮಪಂಚಾಯಿತಿಯವರು ಅನುಮೋದಿಸಿರುವ ನಕ್ಷೆಯಲ್ಲಿ ವಿಸ್ತೀರ್ಣ ವ್ಯತ್ಯಾಸ ಕಂಡುಬಂದಿರುತ್ತದೆಯೆಂದು ಹೇಳಿರುವ ಕಾರಣ ಸದರಿ ವಿಚಾರಗಳ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸುವ ಸಲುವಾಗಿ ಮೂಲ ದಾಖಲಾತಿಗಳ ಸಮೇತ ಗೌರವಾನ್ವಿತರ ಮುಂದೆ ಹಾಜರಾಗುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

6) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಇವರು ಹಾಜರಾಗಿ ದಾಖಲಾತಿಗಳ ಪ್ರತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಪರಿಶೀಲಿಸಿದಾಗ, ದಿ.15/7/2013 ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ.203/14 ರಲ್ಲಿ 0.25 ಗುಂಟೆ ಮತ್ತು ಸ.ನಂ.203/22 ರಲ್ಲಿ 2 ಎಕರೆ ಒಟ್ಟು 2.25 ಎಕರೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಬಳಸಲು ಭೂಪರಿವರ್ತನಾ ಆದೇಶ ಮಾಡಿರುವುದು ಕಂಡುಬರುತ್ತದೆ. ಎದುರುದಾರರು 2 ವಿನ್ಯಾಸ ನಕ್ಷೆಗಳನ್ನು ಹಾಜರು ಪಡಿಸಿದ್ದು, ಒಂದು ವಿನ್ಯಾಸ ನಕ್ಷೆಯನ್ನು ದಿ.28/2/14 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ಅನುಮೋದಿಸಿರುವುದು ಕಂಡುಬರುತ್ತದೆ. ಆದರೆ, ಇನ್ನೊಂದು ಯೋಜನಾ ನಕ್ಷೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ಅನುಮೋದನೆ ಮಾಡಿರುವುದು ಕಂಡುಬರುತ್ತಿಲ್ಲ.

7) ಎದುರುದಾರರು ಹಾಜರಾಗಿ ತನ್ನ ಹೇಳಿಕೆಯಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನಿವೇಶನದ ವಿನ್ಯಾಸ ನಕ್ಷೆಯನ್ನು ಅನುಮೋದಿಸುವ ಪೂರ್ವದಲ್ಲೇ ಗ್ರಾಮಪಂಚಾಯಿತಿಯವರು ಇನ್ನೊಂದು ವಿನ್ಯಾಸ ನಕ್ಷೆಯನ್ನು ಅನುಮೋದಿಸಿ ಆ ಪ್ರಕಾರ ಖಾತೆಯನ್ನು ನೀಡಲಾಗಿದೆಯೆಂದು ತಿಳಿಸಿರುತ್ತಾರೆ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ಅನುಮೋದಿಸಿರುವ ನಕ್ಷೆಗೂ ಹಾಗೂ ಪಂಚಾಯಿತಿಯವರು ಖಾತಾ ನೀಡಿರುವ ನಕ್ಷೆಗೂ ವ್ಯತ್ಯಾಸವಿದೆ. ನಿವೇಶನವನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನೀಡಿರುವ ಅನುಮೋದಿತ ನಕ್ಷೆಯ ಪ್ರಕಾರ ಮಾಡದೆ ಪಂಚಾಯಿತಿಯವರು ತಯಾರಿಸಿರುವ ನಕ್ಷೆಯ ಪ್ರಕಾರ ಮಾಡಲಾಗಿದೆಯೆಂದು ಹೇಳಿರುತ್ತಾರೆ ಮತ್ತು ಸದರಿ ಸಂದರ್ಭದಲ್ಲಿ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿರುವ ವಿಚಾರವನ್ನು ಕೂಡ ಒಪ್ಪಿಕೊಂಡಿರುತ್ತಾರೆ.

8) ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನೀಡಿರುವ ಅನುಮೋದಿತ ನಕ್ಷೆಯನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮದೇ ಆದ ನಕ್ಷೆಯನ್ನು ತಯಾರಿಸಿ 'ಎ' ಖಾತಾ ನೀಡಿರುವುದು ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಪ್ರಸಕ್ತ ಇರುವ ಬಡಾವಣೆಯು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದಿತ ನಕ್ಷೆಗೆ ಅನುಗುಣವಾಗಿಲ್ಲದಿರುವುದು ಕಂಡುಬಂದಿದ್ದು, ಆ ಬಗ್ಗೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/6/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.